## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ. ಹರಿಹರ

## ಸಿ.ಸಿ ನಂಬರ್ಃ 27 /2016

| | | |
|---|---|---|
| ಸಾಕ್ಷಿಯ ಹೆಸರುಃ | ಗಂಗಾಧರಪ್ಪ | ಸಿ ಡಬ್ಲ್ಯೂ - 45 |
| ತಂದೆಯ ಹೆಸರುಃ | ರುದ್ರಪ್ಪ | ಪಿ ಡಬ್ಲ್ಯೂ - 36 |
| ವಯಸ್ಸುಃ | 60 | |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ನಂದಿಗುಡಿ | |

ಸಾಕ್ಷಿ ಪಾಸನ್ನು ಪಡೆದು ಕರೋನಾ ಪರೀಕ್ಷೆಗೆ ಒಳಪಟ್ಟು ನೆಗೆಟಿವ್ ವರದಿಯೊಂದಿಗೆ ಇಂದು ದಿನಾಂಕ ಃ 17-12-2020 ರಂದು ಹಾಜರು ಇದ್ದುದರಿಂದ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ**

ಆರೋಪಿ ಪರಿಚಯ. ನಂದಿತಾವರೆ ಗ್ರಾಮದ ಶ್ರೀನಿವಾಸ್ ರೈಸ್ ಮಿಲ್ ನಲ್ಲಿ 2010 ರಲ್ಲಿ ನಾನು , ಶಿವಮೂರ್ತಯ್ಯ ಮತ್ತು ವೀರಯ್ಯ ಸೇರಿ ಭತ್ತವನ್ನು ಬಸವರಾಜಯ್ಯ ಇವರಿಗೆ ಮಾರಾಟ ಮಾಡಿರುತ್ತೇವೆ. ನನಗೆ ಸೇರಿದ 60 ಚೀಲ ಭತ್ತ ವನ್ನು ಕ್ವಿನ್ ಟಲ್ ಗೆ 1070 ರೂ ಗಳಂತೆ ಮಾರಾಟ ಮಾಡಿರುತ್ತೇವೆ. ನನಗೆ 37 ಸಾವಿರ ಚಿಲ್ಲರೆ ಹಣ ಕೊಡಬೇಕಾಗಿತ್ತು. ಆರೋಪಿ ಒಂದು ವಾರ ಒಂದು ತಿಂಗಳಲ್ಲಿ ಹಣ ಕೊಡುತ್ತೇನೆಂದು ಹೇಳಿದ್ದ . ನಾನು ಶಿವಮೂರ್ತಯ್ಯು ಹಾಗೂ ವೀರಯ್ಯ ಸೇರಿ ಕೇಳಲು ನಂದಿತಾವರೆಯ ಶ್ರೀನಿವಾಸ್ ರೈಸ್ ಮಿಲ್‌ಗೆ ಹೋಗಿರುತ್ತೇವೆ. ಆರೋಪಿ ಒಂದು ವಾರ ಬಿಟ್ಟು ಕೊಡುತ್ತೇನೆಂದು ಹೇಳಿದವನು ಊರು ಬಿಟ್ಟು ಓಡಿ ಹೋಗಿರುತ್ತಾನೆ. ನಮ್ಮ ಭತ್ತವನ್ನು ಶ್ರೀನಿವಾಸ್ ರೈಸ್ ಮಿಲ್ ನ ಪಕ್ಕದಲ್ಲಿ ತೂಕ ಮಾಡಿಸಿದೇವು. ಆರೋಪಿ ಎಲ್ಲೋ ಹೋಗಿರುತ್ತಾನೆಂದು ಗೊತ್ತಾದ ನಂತರ ನಾವು ಹಾಗೂ ಇತರರು ಸೇರಿ ಕೇಸನ್ನು ಮಾಡಿರುತ್ತೇವೆ. ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇವೆ. ಆರೋಪಿ ನಮಗೆ ಹಣ ಕೊಡದೇ ತಪ್ಪು ಮಾಡಿರುತ್ತಾನೆ. ಸಾಕ್ಷಿ ತನ್ನ ಜಮೀನಿನ ಪಹಣಿ ಪತ್ರಿಕೆ ಮತ್ತು ವೇಬ್ರಿಡ್ಜ್ ನ ಒಂದು ರಶೀದಿಯ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 16 ಮತ್ತು 17 ಎಂದು ಗುರುತಿಸಲಾಯಿತು.

( ಸಾಕ್ಷಿ ಈ ಹಂತದಲ್ಲಿ ಭಾಗಶಃ ಪ್ರತಿಕೂಲ ವಾಗಿದೆ ಎಂದು ಸ.ಸ.ಅ ರವರು ಪಾಟೀ ಸವಾಲಿಗೆ ಅನುಮತಿಸಬೇಕೆಂದು ಕೋರಿರುತ್ತಾರೆ, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸ.ಸ. ಅ ರವರಿಂದಃ**

ದಿನಾಂಕಃ 24-05-2010 ರಂದು ಶ್ರೀನಿವಾಸ್ ರೈಸ್ ಮಿಲ್ ನ ಮುಂಭಾಗ ಆರೋಪಿ ಬಂದು ನಮಗೆ ಸೇರಿದ ಭತ್ತವನ್ನು ಕ್ವಿಂಟಲ್ ಗೆ 1075 ರೂಗಳಂತೆ ಖರೀದಿ ಮಾಡಿರುತ್ತಾನೆಂಬುದು ನಿಜ. ಆರೋಪಿ ನನಗೆ 5 ಸಾವಿರ ರೂ ಹಣ ಕೊಟ್ಟು ಉಳಿದ ಹಣ ಒಂದು ತಿಂಗಳ ನಂತರ ಕೊಡುತ್ತೇನೆಂದು

ಹೇಳಿದ್ದ ಎಂಬುದು ನಿಜ. ನನಗೆ ಸೇರಿದ ಭತ್ತ 46.95 ಕ್ವಿಂಟಲ್ ಇತ್ತು ಎನ್ನುವುದು ನಿಜ.

**ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹರಿಹರ.**

ಹಿರಿಯ ಸಿವಿಲ್  ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ. ಹರಿಹರ
ಎಂ ವಿ ಸಿ      /2016

ಪಿ ಡಬ್ಲ್ಯೂ - 3

ಸಾಕ್ಷಿಯನ್ನು ದಿನಾಂಕ  : 10-12-2020                  ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆ: ಅರ್ಜಿದಾರರ  ಪರ ವಕೀಲರಾದ:   ಶ್ರೀ   ಬಿ ಒ. ವಕೀಲರಿಂದ**

**ಪಾಟೀ ಸವಾಲು:  2 ನೇ ಎದುರುದಾರರ ಪರ ಶ್ರೀ  ಎ ಎಂ ವಿ. ವಕೀಲರಿಂದ**

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ.